6.	ಯಾದಗೀರ	08
7.	ಶಾಹಪುರ	09
8.	ಸುರಪುರ	09
9.	ಜೇವರ್ಗಿ	02
10.	ಸೇಡಂ	08
	ಒಟ್ಟು	**187**

ಆ) ಕೊಳವೆ ನೀರು ಸರಬರಾಜು ಯೋಜನೆಗಳು ಮತ್ತು ಹಲವಾರು ಕಾರಣಗಳಿಂದಾಗಿ ಅಪೂರ್ಣವಿರುತ್ತವೆ. ಅವುಗಳು:

1) ಜಲಮೂಲಗಳನ್ನು ಸ್ಥಾಪಿಸುವುದರಲ್ಲಿ ವಿಳಂಬ,

2) ಟ್ಯಾಂಕ್ ಕಟ್ಟಲು ಸ್ಥಳ ಸಿಗದೇ ಇರುವುದು.

3) ಯೋಜನೆಗಳಿಗೆ ವಿದ್ಯುತ್ ಪೂರೈಸುವಲ್ಲಿ ವಿಳಂಬ, ಮತ್ತು

4) ಆಯವ್ಯಯದಲ್ಲಿ ಸಾಕಷ್ಟು ಅನುದಾನ ಇಲ್ಲದೆ ಇರುವುದು.

ಇ) ಮೇಲ್ಕಂಡ ಅಪೂರ್ಣವಿರುವ ಯೋಜನೆಗಳನ್ನು 1997-98 : 1998-99ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ವಿ.ಎಸ್. ಕೌಜಲಗಿ (ಅರೆಬಾವಿ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ಅಭಿವೃದ್ಧಿ ನಿಗಮ (ನಿಯಮಿತ)ದ ಆವ್ಯವಹಾರಗಳಿಗೆ ಸಂಬಧಪಟ್ಟಹಾಗೆ ಸಮಿತಿಯು 30ನೇ ವರದಿಯನ್ನು ಈ ದಿನ ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

ಅಧ್ಯಕ್ಷರು : ಡಿ.ಆರ್. ಪಾಟೀಲ್‌ರವರೇ, ತಮ್ಮ ಅಂದಿನ ಭಾಷಣವನ್ನು ಮುಂದುವರೆಸಿ.

ಶ್ರೀ ಜೆ. ಬಿ. ಶಿವಕುಮಾರ್ : ಅಧ್ಯಕ್ಷರೇ, ನನ್ನದೊಂದು ವಿಚಾರ ಕೊಟ್ಟಿದ್ದೆ.

ಅಧ್ಯಕ್ಷರು : ಈಗ ಅದಕ್ಕೆ ಅವಕಾಶವಿಲ್ಲ.